**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಶ್ರೀರಂಗಪಟ್ಟಣ.**

**ಎಂ.ವಿ.ಸಿ.ಸಂಖ್ಯೆ : 865/2021**

**ಪಿ.ಡಬ್ಲ್ಯೂ-3**

**ಹೆಸರುಃ** ಡಾ.ಶಿವಕುಮಾರ್

**ತಂದೆಯ ಹೆಸರುಃ** ಹಾಲಪ್ಪ

**ವಯಸ್ಸುಃ** 52 ವರ್ಷ

**ವೃತ್ತಿಃ** ವೈದ್ಯಾಧಿಕಾರಿ, ಮಿಮ್ಸ್, ಮಂಡ್ಯ

**ವಾಸಃ** ಮೈಸೂರು.

ದಿನಾಂಕಃ 17.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ :**

ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಸಮನ್ಸ್ ಬಂದ ಪ್ರಯುಕ್ತ ನಾನು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನೀಡುತ್ತಿದ್ದೇನೆ. ನಾನು ಕಳೆದ 17 ವರ್ಷಗಳಿಂದ ಸದರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಅರ್ಜಿದಾರರು ದಿನಾಂಕಃ 04.04.2021 ರಂದು ಅಪಘಾತದ ಸಂಬಂಧ ನಮ್ಮ ಆಸ್ಪತ್ರೆಗೆ ಬಂದು 7 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಸದರಿಯವರಿಗೆ ನಾನು ಚಿಕಿತ್ಸೆ ನೀಡಿರುತ್ತೇನೆ. ಸದರಿಯವರಿಗೆ ಎಡಗಾಲಿನ ತೊಡೆಯ ಮೂಳೆ ಮುರಿದಿರುತ್ತದೆ, ಅವರಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ. ನಂತರದಲ್ಲಿ ಹೊರರೋಗಿಯಾಗಿ ಸದರಿಯವರು ದಿನಾಂಕಃ 16.04.2021 ಹಾಗೂ 21.04.2021 ರಂದು ನನ್ನ ಬಳಿ ಬಂದು ಚಿಕಿತ್ಸೆ ಪಡೆದಿರುತ್ತಾರೆ. ನಂತರದಲ್ಲಿ ಅವರು ನನ್ನ ಬಳಿ ಬಂದಿರುವುದಿಲ್ಲ ಹಾಗಾಗಿ ಅವರ ಸ್ಥಿತಿ ಹೇಗಿದೆ ಎಂದು ನನಗೆ ಗೊತ್ತಿಲ್ಲ. ಸದರಿಯವರನ್ನು ನಾನು ಇತ್ತೀಚಿಗೆ ಪರಿಶೀಲಿಸಿದ ಕಾರಣ ಅವರ ಅಂಗ ನ್ಯೂನ್ಯತೆಯನ್ನು ಹೇಳಲು ನನಗೆ ಆಗುವುದಿಲ್ಲ.

**<u>ಪಾಟೀ ಸವಾಲು : 2ನೇ ಎದುರುದಾರರ ಪರ ವಕೀಲರಿಂದ :</u>**

ನ್ಯಾಯಾಲಯದ ಮುಂದಿರುವ ದಾಖಲೆಗಳ ಪ್ರಕಾರ ಅರ್ಜಿದಾರರು ದಿನಾಂಕಃ 16.04.2021 ಹಾಗೂ 21.04.2021 ರನ್ನು ಹೊರತುಪಡಿಸಿ ಬೇರೆ ದಿನಗಳಂದು ನಮ್ಮ ಆಸ್ಪತ್ರೆಗೆ ಹೊರರೋಗಿಯಾಗಿ ಬಂದಿರುವುದಿಲ್ಲ ಎಂದರೆ ಸರಿ. ಸದರಿಯವರಿಗೆ 3 ಜನ ವೈದ್ಯರ ಟೀಮ್ ಶಸ್ತ್ರಚಿಕಿತ್ಸೆ ಮಾಡಿರುತ್ತದೆ, ನಾನು ಸಹ ಅದರಲ್ಲಿ ಒಬ್ಬ. ಸದರಿ ಟೀಮ್ ಗೆ ನಮ್ಮ HOD ಆದಂತಹ ಡಾ.ಮಂಜಪ್ಪರವರು ಮುಖ್ಯಸ್ಥರಾಗಿರುತ್ತಾರೆ. ಅವರಲ್ಲದೇ ವೈದ್ಯರಾದ ಡಾ.ಅಮರ್ ದೀಪ್ ರವರು ಸಹ ಭಾಗವಹಿಸಿದ್ದರು. ಮೆಡಿಕಲ್ ಬೋರ್ಡಿನವರು ಮಾತ್ರ ಅಂಗ ನ್ಯೂನ್ಯತೆಯನ್ನು ಕೊಡಬೇಕು ಎಂದರೆ ಸರಿ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**